ಸ್ಥಾಪನೆ : 1997

080-22280566
080-22375507
74117 52827

# ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

(ನೋಂದಣಿ ಕ್ರಮಾಂಕ : ಜೆ.ಆರ್.ಬಿ. : ಆರ್.ಜೆ.ಎಸ್. ಸೌಕಾ : 36:159:05-06)

ನಂ. 658/2ಎ, ಎರಡನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್, ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು - 560 053

Website : www.suprajasouhardha.com
e-mail:- supraja_souhardha@rediffmail.com
supraja.souhardha@gmail.com

# 29ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆ (2025-2026)

**ದಿನಾಂಕ : 30-08-2026, ಭಾನುವಾರ**

**ಬೆಳಿಗ್ಗೆ 10.30 ಗಂಟೆಗೆ**

**ಸ್ಥಳ :**

**ಶಾರದಾ ಸ್ತ್ರೀ ಸಮಾಜ ಟ್ರಸ್ಟ್ (ನೋಂ.)**

**ನಂ. 39, ಶತಮಾನೋತ್ಸವ ಭವನ, 1ನೇ ಮುಖ್ಯ ರಸ್ತೆ,**
**ಆಲ್ಬರ್ಟ್ ವಿಕ್ಟರ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560 018**

**ವಿಶೇಷ ಸೂಚನೆ : -**

1. ಸದಸ್ಯರು ಸಾಮಾನ್ಯ ಸಭೆಗೆ ಆಗಮಿಸುವಾಗ ತಪ್ಪದೇ ಮಹಾಸಭೆಯ ಸೂಚನಾ ಪತ್ರ ಹಾಗೂ ಸಹಕಾರಿಯ ಸದಸ್ಯತ್ವದ ಗುರುತಿನ ಚೀಟಿಯೊಡನೆ ಬರಬೇಕಾಗಿ ಕೋರಲಾಗಿದೆ.
2. ಸಹಕಾರಿಯ ಸದಸ್ಯತ್ವದ ಗುರುತಿನ ಚೀಟಿ ಮತ್ತು ಷೇರು ಪ್ರಮಾಣ ಪತ್ರವನ್ನು ಪಡೆಯದೇ ಇರುವ ಸದಸ್ಯರು ತಮ್ಮ ಇತ್ತೀಚಿನ 2 ಭಾವಚಿತ್ರಗಳೊಂದಿಗೆ ಸಹಕಾರಿಗೆ ಬಂದು ಖುದ್ದಾಗಿ ಪಡೆಯತಕ್ಕದ್ದು.
3. ಸಾಮಾನ್ಯ ಸದಸ್ಯರ ಸಭೆಯಲ್ಲಿ ಯಾವುದೇ ವಿಷಯದ ಬಗ್ಗೆ ಸ್ಪಷ್ಟೀಕರಣ ಅಥವಾ ಪ್ರಶ್ನೆ ಕೇಳಬಯಸುವ ಸುಸ್ತಿದಾರರಲ್ಲದ ಸದಸ್ಯರು ಸಭೆಯು ನಡೆಯುವುದಕ್ಕೆ 07 ದಿವಸ ಮುಂಚಿತವಾಗಿ ಮುಖ್ಯಕಾರ್ಯನಿರ್ವಾಹಕರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು. ಅದರಂತೆ ಯಾವುದಾದರೂ ಕೋರಿಕೆ ಸಲ್ಲಿಸಿದ್ದಲ್ಲಿ ಸಭೆಯಲ್ಲಿ ಚರ್ಚಿಸಲಾಗುವುದು.
4. ಸದಸ್ಯರುಗಳು ಕಳೆದ ಮೂರು ವರ್ಷ ಮತ್ತು ಮೇಲ್ಪಟ್ಟ ಅವಧಿಯ ಲಾಭಾಂಶವನ್ನು (Dividend) ಪಡೆಯದೇ ಇದ್ದಲ್ಲಿ ಸಹಕಾರಿಗೆ ಬಂದು ಪಡೆಯಲು ವಿನಂತಿ. ಇಲ್ಲವಾದಲ್ಲಿ ಅವರ 2023-24ನೇ ಸಾಲಿನ ಲಾಭಾಂಶವನ್ನು ಮೀಸಲು ನಿಧಿಗೆ ವರ್ಗಾಯಿಸಲಾಗುವುದು.
5. ಸಾಮಾನ್ಯ ಸದಸ್ಯರ ಸಭೆಯ ಬೆಳಗ್ಗೆ 9.00 ರಿಂದ 10.00 ರವರೆಗೆ ಉಪಹಾರ ಮತ್ತು ಸಭೆಯ ಮುಕ್ತಾಯದ ನಂತರ ಭೋಜನ ವ್ಯವಸ್ಥೆಯಿರುತ್ತದೆ.
6. ಸಾಮಾನ್ಯ ಸದಸ್ಯರ ಸಭೆಗೆ ಬರುವ ಪ್ರಥಮ 300 ಸದಸ್ಯರಿಗೆ ವಿಶೇಷ ಉಡುಗೊರೆ ನೀಡಲಾಗುವುದು.
7. ಸದಸ್ಯರು ಇಲ್ಲಿಯವರೆವಿಗೂ ತಮ್ಮ ದೂರವಾಣಿ ಸಂಖ್ಯೆ, ಆಧಾರ್ ಸಂಖ್ಯೆ, ಪ್ಯಾನ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ನೀಡದೇ ಇರುವವರು ಸಹಕಾರಿಯ ಮೊಬೈಲ್ ಫೋನ್ ನಂಬರ್ 74117 52827 ಗೆ ವಾಟ್ಸಾಪ್ / ಮೆಸೇಜ್ / ಸಹಕಾರಿಯ ಇ-ಮೇಲ್ supraja_souhardha@rediffmail.com, supraja.souhardha@gmail.com ಮುಖಾಂತರ ಕಳುಹಿಸಲು ವಿನಂತಿಸಲಾಗಿದೆ.

# ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ. 658/2ಎ, ಎರಡನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್, ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು–560 053.
ದೂರವಾಣಿ : 080–22280566 / 22375507, 7411752827

## 29ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ಆಮಂತ್ರಣ

ಆತ್ಮೀಯ ಸದಸ್ಯರೇ,

ನಮ್ಮ ಸಹಕಾರಿಯ 2025–26ನೇ ಸಾಲಿನ ಸಾಮಾನ್ಯ ಸದಸ್ಯರ ಸಭೆಯನ್ನು ದಿನಾಂಕ 30–8–2026ನೇ ಭಾನುವಾರ ಬೆಳಿಗ್ಗೆ 10.30 ಕ್ಕೆ "ಶಾರದಾ ಸ್ತ್ರೀ ಸಮಾಜ ಟ್ರಸ್ಟ್ (ರಿ), ನಂ. 39, ಶತಮಾನೋತ್ಸವ ಭವನ", 1ನೇ ಮುಖ್ಯ ರಸ್ತೆ, ಆಲ್ಬರ್ಟ್ ವಿಕ್ಟರ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018 ರಲ್ಲಿನ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ. ಎಂ.ಶಿವರುದ್ರಪ್ಪರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯಲ್ಲಿ ತಿಳಿಸಿರುವ ವಿಷಯಗಳನ್ನು ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ.

### ಸಭೆಯ ಕಾರ್ಯಸೂಚಿ

### ಎ) ಉದ್ಘಾಟನಾ ಕಾರ್ಯಕ್ರಮ

1. ಪ್ರಾರ್ಥನೆ
   (ಎ) ಕಳೆದ ಸಾಮಾನ್ಯ ಸದಸ್ಯರ ಸಭೆ ಹಾಗೂ ಇಂದಿನ ಸಭೆ ನಡುವೆ ದೈವಾಧೀನರಾದ ಸದಸ್ಯರಿಗೆ ಗೌರವ ಪೂರ್ಣ ಶ್ರದ್ಧಾಂಜಲಿ ಅರ್ಪಿಸುವುದು.
   (ಬಿ) ಸಾಮಾನ್ಯ ಸದಸ್ಯರ ಸಭೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟನೆ
2. ಸ್ವಾಗತ ಭಾಷಣ
3. ಸನ್ಮಾನ ಕಾರ್ಯಕ್ರಮ.
   (ಅ) ಸಹಕಾರಿಯ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ.
   (ಆ) ಸಹಕಾರಿಯ 80 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಹಿರಿಯ ಸದಸ್ಯರಿಗೆ ಸನ್ಮಾನ.

### ಬಿ) ವ್ಯಾಪಾರ ಅಧಿವೇಶನ

4. 2025–26ನೇ (29ನೇ) ಸಾಲಿನ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
5. ದಿನಾಂಕ 14–09–2025ರಂದು ನಡೆದ 28ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ನಡಾವಳಿಗಳನ್ನು ದೃಢೀಕರಿಸುವುದು.
6. 2025–26ನೇ ಸಾಲಿನ ಆಡಳಿತ ಮಂಡಳಿ ವಾರ್ಷಿಕ ವರದಿ ಮಂಡನೆ ಹಾಗೂ ಅಂಗೀಕಾರ.
7. 2025–26ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಮತ್ತು ಲೆಕ್ಕ ಪರಿಶೋಧಿತ ಲೆಕ್ಕ ಪತ್ರಗಳ ಮಂಡನೆ ಹಾಗೂ ಅಂಗೀಕಾರ.
8. 2025–26ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಅನುಮೋದಿಸುವುದು.
9. 2025–26ನೇ ಸಾಲಿನ ನಿವ್ವಳ ಲಾಭದ ವಿಲೇವಾರಿಯನ್ನು ಅನುಮೋದಿಸುವುದು.
10. 2026–27ನೇ ಸಾಲಿನ ಲೆಕ್ಕ ಪತ್ರಗಳ ಪರಿಶೋಧನೆಗಾಗಿ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
11. 2025–26ನೇ ಸಾಲಿನ ಬಜೆಟ್ ನ ಹೆಚ್ಚು/ ಕಡಿಮೆ ವಾಸ್ತವಿಕ ಖರ್ಚಿನ ಅನುಮೋದನೆ ಹಾಗೂ 2026–27ನೇ ಸಾಲಿನ ವಾರ್ಷಿಕ ಮುಂಗಡ ಪತ್ರ(ಬಜೆಟ್) ಅನುಮೋದಿಸುವುದು.
12. ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಸಿಬ್ಬಂದಿ ಸೇವಾ ನಿಯಮಾವಳಿಗಳ ತಿದ್ದುಪಡಿ ಕುರಿತು.
13. ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಸಾಲ ನಿಯಮಾವಳಿ ತಿದ್ದುಪಡಿ ಕುರಿತು.
14. ಸಹಕಾರಿಯಲ್ಲಿ ಸಾಲ ಪಡೆದು ಸುಸ್ತಿಯಾದ ಅಗ್ರ ಸುಸ್ತಿದಾರರ ಪಟ್ಟಿ ಪರಿಗಣನೆ.
15. ಸಹಕಾರಿಯಲ್ಲಿನ ಮೀಸಲು ನಿಧಿಯ ಮೊತ್ತದಲ್ಲಿ ಶೇ. 80% ರನ್ನು ಸಹಕಾರಿಗೆ ಸ್ವಂತ ನಿವೇಶನ ಖರೀದಿ/ಕಟ್ಟಡ ನಿರ್ಮಾಣ/ಕಟ್ಟಡ ಖರೀದಿಸುವ ಬಗ್ಗೆ ಚರ್ಚೆ ಹಾಗೂ ತೀರ್ಮಾನ.
16. ಸೂಕ್ತ ಮುನ್ಸೂಚನೆಯಂತೆ ಲಿಖಿತ ಪತ್ರದ ಮೂಲಕ ಬಂದ ಪ್ರಶ್ನೆಗಳು–ಸ್ಪಷ್ಟೀಕರಣ.
17. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.
18. ವಂದನಾರ್ಪಣೆ.

ಆಡಳಿತ ಮಂಡಳಿಯ ಆದೇಶದ ಮೇರೆಗೆ
ಸಹಿ/–
ಡಾ.. ಹೆಚ್. ನರಸಿಂಹಮೂರ್ತಿ
ಮುಖ್ಯ ಕಾರ್ಯನಿರ್ವಾಹಕರು

ಸ್ಥಳ : ಬೆಂಗಳೂರು
ದಿನಾಂಕ : 01–08–2026

## ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಸದಸ್ಯರುಗಳ ಮಕ್ಕಳು ಪ್ರತಿಭಾ ಪುರಸ್ಕಾರಗಳನ್ನು ಪಡೆಯಲು 2025–26ನೇ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಶೇ. 90ಕ್ಕಿಂತ ಹೆಚ್ಚು (ಸಿ.ಬಿ.ಎಸ್.ಸಿ./ಐ.ಸಿ.ಎಸ್.ಸಿ.ಯಲ್ಲಿ ಎ+ ಶ್ರೇಣಿ), ದ್ವಿತೀಯ ಪಿ.ಯು.ಸಿ.ಯಲ್ಲಿ ಶೇ. 85 ಕ್ಕಿಂತ ಹೆಚ್ಚು, ಅಂತಿಮ ಪದವಿ ಪರೀಕ್ಷೆಯಲ್ಲಿ ಶೇ. 75ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿ ತೇರ್ಗಡೆಯಾದವರ ಅಂಕಪಟ್ಟಿಯನ್ನು ದಿನಾಂಕ 15–08–2026 ರೊಳಗಾಗಿ ಸಹಕಾರಿಗೆ ತಲುಪಿಸಬೇಕಾಗಿ ಹಾಗೂ ಸಭೆಯ ಪ್ರಾರಂಭದ ವೇಳೆಗೆ ಮಕ್ಕಳೊಂದಿಗೆ ಹಾಜರಿರಬೇಕೆಂದು ಹಾಗೂ ಕಾಯ್ದಿರಿಸಿದ ಮುಂದಿನ ಸಾಲಿನಲ್ಲಿ ಆಸೀನರಾಗಬೇಕಾಗಿ ವಿನಂತಿ.

## 80 ವರ್ಷ ಮೇಲ್ಪಟ್ಟ ಹಿರಿಯ ಸದಸ್ಯರಿಗೆ ಸನ್ಮಾನ

ಸಹಕಾರಿಯು 80 ವರ್ಷ ಮೇಲ್ಪಟ್ಟ ಸದಸ್ಯರುಗಳನ್ನು ಪ್ರತಿವರ್ಷದಂತೆ ಈ ವರ್ಷವೂ ಸಾಮಾನ್ಯ ಸದಸ್ಯರ ಸಭೆಯಲ್ಲಿ ಸನ್ಮಾನಿಸಲು ತೀರ್ಮಾನಿಸಲಾಗಿದೆ. ಆದುದರಿಂದ ಇಲ್ಲಿಯವರೆಗೂ ಈ ಹಿಂದೆ ನಡೆದ ಸರ್ವ ಸದಸ್ಯರ ಸಭೆಗಳಲ್ಲಿ ನಮ್ಮಿಂದ ಸನ್ಮಾನ ಪಡೆಯದೇ ಇರುವ 80 ವರ್ಷ ಮೇಲ್ಪಟ್ಟ ಹಿರಿಯ ಸದಸ್ಯರುಗಳು ಸನ್ಮಾನ ಸ್ವೀಕರಿಸಲು ಇಚ್ಛೆಪಟ್ಟಲ್ಲಿ ತಮ್ಮ ವಿವರವನ್ನು ಮುಖ್ಯ ಕಾರ್ಯನಿರ್ವಾಹಕರಿಗೆ ದಿನಾಂಕ 25–08–2026ರೊಳಗೆ ನೀಡಬೇಕೆಂದು ಸವಿನಯ ಪ್ರಾರ್ಥನೆ. (ಸಹಕಾರಿಯ ಮೊಬೈಲ್ ಸಂಖ್ಯೆ 7411752127). ವಿವರ ನೀಡಿರುವ ಹಿರಿಯ ಸದಸ್ಯರೆಲ್ಲರಿಗೂ ಸಭೆಯ ಪ್ರಾರಂಭದ ವೇಳೆಗೆ ಹಾಜರಿರಬೇಕೆಂದು ಹಾಗೂ ಕಾಯ್ದಿರಿಸಿದ ಮುಂದಿನ ಸಾಲಿನಲ್ಲಿ ಆಸೀನರಾಗಬೇಕೆಂದು ಸವಿನಯ ಪ್ರಾರ್ಥನೆ.

## ಸದಸ್ಯತ್ವ ಬಗ್ಗೆ ಕೆಲವು ಮುಖ್ಯ ನಿಯಮಗಳು

ಆತ್ಮೀಯ ಸದಸ್ಯರೇ

ಸಹಕಾರಿಯ ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿರುವ ಕನಿಷ್ಠ ಮಟ್ಟದ ಸಹಕಾರಿಯ ಸೇವೆಯನ್ನು ಸತತ ಎರಡು (ಸಹಕಾರ ವರ್ಷಗಳವರೆಗೆ) ಬಳಸಿಕೊಂಡಿಲ್ಲದಿದ್ದರೇ ಅಥವಾ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತ ಮತ್ತು ಅವಧಿಯನ್ನು ಮೀರಿ ಸಹಕಾರಿಗೆ ಮಾಡಬೇಕಾದ ಯಾವುದೇ ಸಂದಾಯವನ್ನು ಮಾಡಲು ವಿಫಲವಾದರೆ, ಅಂಥ ವ್ಯಕ್ತಿಯು ಸದಸ್ಯನಾಗಿ ಮುಂದುವರೆಯಲು ಅರ್ಹನಾಗಿರತಕ್ಕದ್ದಲ್ಲ.

ಸಹಕಾರಿಯ ಯಾವುದೇ ಬಾಕಿಗಳಿಗೆ ಸುಸ್ತಿದಾರನಾಗಿದ್ದರೆ, ಹಿಂದಿನ ಐದು ಮಹಾಸಭೆಯ ಪೈಕಿ ಯಾವುದೇ ಎರಡು ಸಭೆಗಳಿಗೆ ಹಾಜರಾಗಿಲ್ಲದಿದ್ದರೆ ಹಾಗೂ ಹಿಂದಿನ ಐದು ಸಹಕಾರಿ ವರ್ಷಗಳಲ್ಲಿ ಯಾವುದೇ ಎರಡು ವರ್ಷಗಳಲ್ಲಿ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿದ ಸಾಮಾನ್ಯ ಕನಿಷ್ಠ ವ್ಯವಹಾರವನ್ನು ಮಾಡದಿದ್ದರೆ ಅಂತಹ ಸದಸ್ಯನು ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಆಡಳಿತ ಮಂಡಳಿಯ ಚುನಾವಣೆಯಲ್ಲಿ ಮತದಾನ ಮಾಡಲು **ಮುಂದಿನ ಒಂದು ವರ್ಷದವರೆಗೆ ಅನರ್ಹಗೊಳ್ಳುತ್ತಾನೆ.**

ಪ್ರತಿ ಸದಸ್ಯರು ಸಹಕಾರಿಯ ಸದಸ್ಯತ್ವಕ್ಕೆ ಕೆ.ವೈ.ಸಿ. ದಾಖಲಾತಿಗಳನ್ನು ಅಂದರೆ ವಿಳಾಸದ ದಾಖಲೆ, ಪ್ಯಾನ್ ಹಾಗೂ ಆಧಾರ್ ಕಾರ್ಡ್ ಪ್ರತಿಯನ್ನು ನೀಡಬೇಕು. ಇಲ್ಲಿಯವರೆಗೆ ನೀಡದಿರುವ ಸಹಕಾರಿಯ ಸದಸ್ಯರುಗಳು **2023–24ನೇ ಸಾಲಿನ** ಡಿವಿಡೆಂಡ್‌ಗಳನ್ನು ಸೌಹಾರ್ದದ ಮಾರ್ಗದರ್ಶನ, ಕಾಯ್ದೆ ಹಾಗೂ ಸಹಕಾರಿಯ ಉಪವಿಧಿಯಂತೆ ಸಹಕಾರಿಯ ಮೀಸಲು ನಿಧಿಗೆ ವರ್ಗಾಯಿಸಲಾಗುವುದು. ಆದುದರಿಂದ ಈ ದಾಖಲಾತಿಗಳನ್ನು 30–09–2026 ರೊಳಗಾಗಿ ಸಲ್ಲಿಸುವಂತೆ ಕೋರಲಾಗಿದೆ.

ಸದಸ್ಯರುಗಳು ತಮ್ಮ ಉಳಿತಾಯ ಖಾತೆಯಲ್ಲಿ 2 ವರ್ಷಗಳು ಮೀರಿ ವ್ಯವಹರಿಸದಿದ್ದಲ್ಲಿ ಮತ್ತು ಕೆ.ವೈ.ಸಿ. ದಾಖಲಾತಿ, (ಪ್ಯಾನ್ ಸಂಖ್ಯೆ ಮತ್ತು ಆಧಾರ್ ಸಂಖ್ಯೆ) ನೀಡದಿರುವ ಸದಸ್ಯರ ಉಳಿತಾಯ ಠೇವಣಿ ಖಾತೆಯನ್ನು ನಿಷ್ಕ್ರಿಯ ಖಾತೆಯೆಂದು ಘೋಷಿಸಲಾಗುವುದು.

## ಪ್ರಗತಿಯ ಪಥದಲ್ಲಿ ನಿಮ್ಮ ಸಹಕಾರಿ (ಲಕ್ಷ ರೂ.ಗಳಲ್ಲಿ)

| ಕ್ರ.ಸಂ. | ವಿವರಗಳು | 2020–21 | 2021–22 | 2022–23 | 2023–24 | 2024–25 | 2025–26 |
|---|---|---|---|---|---|---|---|
| 1 | ಷೇರು ಬಂಡವಾಳ | 116.52 | 140.77 | 141.37 | 146.27 | 146.13 | 147.83 |
| 2 | ಠೇವಣಿಗಳು | 3416.71 | 3200.61 | 2769.48 | 2658.78 | 2639.99 | 2627.82 |
| 3 | ಸಾಲಗಳು | 2426.39 | 1887.31 | 1759.34 | 2258.76 | 2136.15 | 1727.92 |
| 4 | ಹೂಡಿಕೆಗಳು | 2112.88 | 2388.37 | 2598.87 | 2087.30 | 1918.18 | 2353.18 |
| 5 | ದುಡಿಯುವ ಬಂಡವಾಳ | 4777.22 | 4596.36 | 4250.47 | 4297.16 | 4318.37 | 4759.52 |
| 6 | ನಿವ್ವಳ ಲಾಭ | 170.09 | 179.09 | 189.96 | 163.06 | 292.86 | 211.31 |
| 7 | ಲಾಭಾಂಶ | 25% | 25% | 25% | 25% | 25% | *25% |
| 8 | ಮೀಸಲು ನಿಧಿ ಮತ್ತು ಇತರ ಮೀಸಲು ನಿಧಿಗಳು | 1119.29 | 1254.94 | 1358.70 | 1478.61 | 1722.61 | 1887.44 |

* ನಿರೀಕ್ಷಿತ

### ನಿರ್ದೇಶಕ ಮಂಡಳಿ

ಶ್ರೀ ಎಂ. ಶಿವರುದ್ರಪ್ಪ — ಅಧ್ಯಕ್ಷರು

ಶ್ರೀ ಎನ್.ಎನ್. ಕಾಂತರಾಜ್ — ಉಪಾಧ್ಯಕ್ಷರು

ಶ್ರೀ.ಎನ್.ಸುಧಾಮ — ನಿರ್ದೇಶಕರು

ಶ್ರೀ.ಬಿ.ವಿ.ಪ್ರಸನ್ನಕುಮಾರ್ — ನಿರ್ದೇಶಕರು

ಶ್ರೀ.ಎಸ್.ಸಿ.ಜಯಕುಮಾರ್ — ನಿರ್ದೇಶಕರು

ಶ್ರೀ.ಎಂ.ಮಲ್ಲಿಕಾರ್ಜುನ — ನಿರ್ದೇಶಕರು

ಶ್ರೀಮತಿ.ಎಂ.ಎಸ್.ವೀಣಾ — ನಿರ್ದೇಶಕರು

ಶ್ರೀಮತಿ ಮುಕ್ತಾ ಶಿವರುದ್ರಪ್ಪ — ನಿರ್ದೇಶಕರು

ಶ್ರೀ.ಎಂ.ವಿಶ್ವನಾಥ್ — ನಿರ್ದೇಶಕರು

ಶ್ರೀ.ಬಿ.ವಿ.ಸತೀಶ್ — ನಿರ್ದೇಶಕರು

ಶ್ರೀ.ಕೆ.ಎನ್.ವೆಂಕಟರಾಮ್ — ನಿರ್ದೇಶಕರು

ಶ್ರೀ.ಎಸ್.ಡಿ.ಕೇಶವಮೂರ್ತಿ — ನಿರ್ದೇಶಕರು

ಶ್ರೀ.ಸಿ.ಎಸ್.ಉಮಾಶಂಕರ್ — ವೃತ್ತಿಪರ ನಿರ್ದೇಶಕರು

ಡಾ. ಹೆಚ್. ನರಸಿಂಹಮೂರ್ತಿ — ಮುಖ್ಯ ಕಾರ್ಯನಿರ್ವಾಹಕರು

ಶ್ರೀ ತೋಪೇಗೌಡ — ವ್ಯವಸ್ಥಾಪಕರು

---

ಅಂಚೆ ದೃಢೀಕರಣ ಪಡೆದಿದೆ

ತೆರೆದ–ಅಂಚೆ

ಗೆ,


ಇಂದ :

**ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್**

ನಂ. 658/2ಎ, ಎರಡನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್,
ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು–560 053.

**ದೂರವಾಣಿ : 22280566 /22375507 /74117 52827**